# ಅರ್ಥ: ಆಯುರ್ವೇದ ಆಸ್ಪತ್ರೆ ಶೀಘ್ರ ಆರಂಭ

ಬೆಂಗಳೂರು, ಮಾರ್ಚ್ 10- ಬೆಂಗಳೂರು ಮೂಲದ ಆಯುರ್ವೇದ ಆರೋಗ್ಯ ಕೇಂದ್ರ 'ಅರ್ಥ', ದೊಡ್ಡಬಳ್ಳಾಪುರ ಬಳಿ 200 ಹಾಸಿಗೆಗಳ ಚಾರಿಟೇಬಲ್ ಆಯುರ್ವೇದ ಆಸ್ಪತ್ರೆಯನ್ನು ಶೀಘ್ರದಲ್ಲಿಯೇ ಆರಂಭಿಸಲಿದೆ.

ಯಶಸ್ವಿ ಐದು ವರ್ಷಗಳನ್ನು ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ ಇಂದು ಇಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ 'ಅರ್ಥ'ನ ವೈದ್ಯಕೀಯ ನಿರ್ದೇಶಕ ಡಾ. ಪ್ರಶಾಂತ್ ಎಸ್. ಆಚಾರ್ಯ ಈ ವಿಷಯ ತಿಳಿಸಿದರು. ನಾಲ್ಕೈದು ತಿಂಗಳಲ್ಲಿ ಈ ಆಸ್ಪತ್ರೆ ಕಾರ್ಯಾರಂಭ ಮಾಡಲಿದೆ ಎಂದರು.

ರಷ್ಯ, ಆಫ್ರಿಕಾ ಮತ್ತಿತರ ದೇಶಗಳಲ್ಲಿ ಕಾಯಿಲೆಗಳಿಗೆ ಆಯುರ್ವೇದ ಚಿಕಿತ್ಸೆ ಪಡೆದರೆ ಅದಕ್ಕೆ ವಿಮೆ ಸೌಲಭ್ಯ ಒದಗಿಸಲಾಗುತ್ತಿದೆ. ಆದರೆ ಭಾರತದಲ್ಲಿ ಈ ಸೌಲಭ್ಯವನ್ನು ಇದುವರೆಗೆ ಒದಗಿಸಿಲ್ಲ. ಆಯುರ್ವೇದ ಮೂಲಕ ಶಸ್ತ್ರಚಿಕಿತ್ಸೆ ಇಲ್ಲದೇ ಕಾಯಿಲೆ ಗುಣಪಡಿಸುತ್ತಿದ್ದರೂ ವಿಮೆ ಸೌಲಭ್ಯ ವಿಸ್ತರಿಸಿಲ್ಲ ಎಂದರು.

**ರೈತರಿಗೆ ತರಬೇತಿ:** ಆಯುರ್ವೇದ ಚಿಕಿತ್ಸೆಯು 21ನೇ ಶತಮಾನದ ಜೀವನ ಶೈಲಿಯಾಗಿದ್ದು, ತರಬೇತಿಯಲ್ಲಿ ಏಕರೂಪತೆ ತರಲು 'ಅರ್ಥ' ಉದ್ದೇಶಿಸಿದೆ. ಗಿಡಮೂಲಿಕೆ ಔಷಧಿಗಳ ಜಾಗತಿಕ ಮಾರುಕಟ್ಟೆ ತ್ವರಿತವಾಗಿ ಬೆಳೆಯುತ್ತಿದೆ. ಸದ್ಯಕ್ಕೆ ಔಷಧಿ ಗುಣಗಳು ಇರುವ ಗಿಡಮೂಲಿಕೆಗಳ ಜಾಗತಿಕ ವಹಿವಾಟು 16ರಿಂದ 20 ಶತಕೋಟಿ ಡಾಲರ್‌ಗಳಷ್ಟು ಇದೆ. ಗಿಡಮೂಲಿಕೆಗಳಿಗೆ ಅಪಾರ ಬೇಡಿಕೆ ಇದೆ. ಈ ಅವಕಾಶ ಸದುಪಯೋಗ ಮಾಡಿಕೊಳ್ಳುವ ನಿಟ್ಟಿನಲ್ಲಿ ರೈತ ಸಮುದಾಯಕ್ಕೆ ಸೂಕ್ತ ತರಬೇತಿ ನೀಡಲು ಉದ್ದೇಶಿಸಲಾಗಿದೆ ಎಂದು ಅವರು ಹೇಳಿದರು.

ಬೆನ್ನು ನೋವು, ಮಧುಮೇಹ, ಉದ್ವಿಗ್ನತೆ, ಕೇಶ ಮತ್ತು ಚರ್ಮ ರಕ್ಷಣೆ, ಲೈಂಗಿಕ ದೌರ್ಬಲ್ಯ, ನರರೋಗ, ಒತ್ತಡ ಸಂಬಂಧಿ ಸಮಸ್ಯೆಗಳಿಗೆ ಈ ಕೇಂದ್ರ ಯಶಸ್ವಿ ಚಿಕಿತ್ಸೆ ನೀಡುತ್ತ ಬಂದಿದೆ. ಬೆನ್ನು ನೋವು ಸಂಬಂಧಿ ಸಮಸ್ಯೆಗಳನ್ನು ಉಪಶಮನಗೊಳಿಸಲು 'ಅರ್ಥ' ಸಂಶೋಧನಾ ಕೇಂದ್ರವು ವಿಶಿಷ್ಟ ಔಷಧಿ ಅಭಿವೃದ್ಧಿಪಡಿಸಿದೆ. ಆಧುನಿಕ ಜೀವನ ಶೈಲಿಯಿಂದಾಗಿ ಕಾಣಿಸಿಕೊಳ್ಳುವ ಅನೇಕ ಬಗೆಯ ಬೆನ್ನು ನೋವನ್ನೂ ಇದು ಪರಿಣಾಮಕಾರಿಯಾಗಿ ಗುಣಪಡಿಸುತ್ತದೆ ಎಂದರು. 'ಅರ್ಥ' ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ರಜತ್ ಗುಪ್ತಾ, ಆಯುರ್ವೇದ ತರಬೇತಿ ಕೇಂದ್ರ ಸ್ಪರ್ಶದ ಅಂತರ್‌ರಾಷ್ಟ್ರೀಯ ಪ್ರತಿನಿಧಿ ಮೇರಿಯಂ ಹೊಲ್ಮನ್ ಬಾರ್ನ್ಸ್ ಉಪಸ್ಥಿತರಿದ್ದರು.

ವಿವರಗಳಿಗೆ 080 - 2528 8630, 2525 4654, ಮೊಬೈಲ್- 98450 69363 ಸಂಪರ್ಕಿಸಿ.